A7

**ಶ್ರೀ.ಡಿ.ಎಸ್‌ಅರುಣ್ ಶಾಸಕರು ಕರ್ನಾಟಕ ವಿದಾನ ಪರಿಷತ್ ರವರು**
**ದಿನಾಂಕ:23/07/2024 ರ ಶೂನ್ಯ ವೇಳೆಯ ಪ್ರಸ್ತಾಪಕ್ಕೆ ಉತ್ತರ**

***************

**ಸರ್ಕಾರದ ನಿರ್ಲಕ್ಷ್ಯಕ್ಕೆ ಒಳಗಾಗಿರುವ ರೇಷ್ಮೆ ಇಲಾಖೆಗೆ ಮರುಜೀವ ನೀಡುವ ಕುರಿತು**

ಪ್ರಸ್ತುತ ರೇಷ್ಮೆ ಇಲಾಖೆಯಲ್ಲಿ ಒಟ್ಟು 4299 ಮಂಜೂರಾದ ಹುದ್ದೆಗಳಿದ್ದು ಅದರಲ್ಲಿ 517 ಹುದ್ದೆಗಳು ಖಾಯಂ ಆಗಿದ್ದು, 3782 ಹುದ್ದೆಗಳು ತಾತ್ಕಾಲಿಕವಾಗಿರುತ್ತವೆ. ಸದರಿ ತಾತ್ಕಾಲಿಕ ಹುದ್ದೆಗಳಿಗೆ ಪ್ರತೀ ಆರ್ಥಿಕ ವರ್ಷಕ್ಕೆ ಸರ್ಕಾರದಿಂದ ಹುದ್ದೆಗಳ ಮುಂದುವರಿಕೆಗೆ (SCHEME CONTINUATION) ಆದೇಶ ಪಡೆಯಲಾಗುತ್ತದೆ.

ರೇಷ್ಮೆ ಇಲಾಖೆಯಲ್ಲಿ ಈ ಹಿಂದೆ ಇದ್ದಂತಹ ವೃಂದ ಬಲದ ಒಟ್ಟು 4299 ಮಂಜೂರಾದ ಹುದ್ದೆಗಳು ಚಾಲ್ತಿಯಲ್ಲಿರುತ್ತವೆ, ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ವೃಂದದ ಅಧಿಕಾರಿ/ನೌಕರರ ಒಟ್ಟು ಸಂಖ್ಯೆ 1278 ಆಗಿರುತ್ತದೆ.

ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಾಮಾವಳಿಗಳು ಹಾಗೂ ಇಲಾಖೆ ಪುನರ್ ಸಂಘಟನೆಯ ಸಮಗ್ರ ಪರಿಷ್ಕರಣೆಯು ಜಾರಿಗೊಳಿಸುವ ಕುರಿತಂತೆ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

**ಮುಂದುವರೆದು ಇಲಾಖೆಯನ್ನು ಬಲವರ್ಧನೆಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.**

ರೇಷ್ಮೆ ಇಲಾಖೆಯಲ್ಲಿ ರೇಷ್ಮೆ ವಿಸ್ತರಣಾಧಿಕಾರಿ ಹುದ್ದೆಯಲ್ಲಿ ಈಗಾಗಲೆ 04 ರೇಷ್ಮೆ ವಿಸ್ತರಣಾಧಿಕಾರಿಗಳನ್ನು ನೇರ ನೇಮಕಾತಿ ಆದೇಶ ಹೊರಡಿಸಿದೆ. 67 ರೇಷ್ಮೆ ವಿಸ್ತರಣಾಧಿಕಾರಿಗಳ ನೇರ ನೇಮಕಾತಿ ಕುರಿತಂತೆ ಆಯ್ಕೆ ಪಟ್ಟಿ ಪ್ರಕಟಣೆಗೊಂಡಿದ್ದು ನೇಮಕಾತಿ ಆದೇಶ ಹೊರಡಿಸುವ ಹಂತದಲ್ಲಿರುತ್ತದೆ. ಪ್ರಸ್ತುತ ಖಾಲಿ ಇರುವ ರೇಷ್ಮೆ ನಿರೀಕ್ಷಕರು-81 ,ರೇಷ್ಮೆ ಪ್ರದರ್ಶಕರು-65 ರೇಷ್ಮೆ ಪ್ರವರ್ತಕರು-62 ಹುದ್ದೆಗಳಿಗೆ ನೇರನೇಮಕಾತಿ ಕುರಿತಂತೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿರುತ್ತದೆ. ಅಲ್ಲದೆ 743 ಹೊರಗುತ್ತಿಗೆ ನೌಕರರನ್ನು ಖಾಲಿ ಹುದ್ದೆಗಳ ಎದುರಾಗಿ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

ಈಗಾಗಲೇ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಹಾಗೂ ಕಾರ್ಯಾಧಾರಿತ ದರದ ಮೇಲೆ 268 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಇಲಾಖೆಯಲ್ಲಿ ಲಭ್ಯವಿರುವ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಹೆಚ್ಚುವರಿ ಪ್ರಭಾರದಲ್ಲಿರಿಸಿ, ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗಿರುತ್ತದೆ.

ಮುಂದುವರೆದಂತೆ, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ **ಲೋಕನಾಥಪುರ ಗ್ರಾಮದ ಸ.ನಂ 97 ರಲ್ಲಿ 5.00** ಎಕರೆ ಕ್ಷೇತ್ರದಲ್ಲಿ ಮಾದರಿ ಚಾಕಿ ಸಾಕಾಣಿಕಾ ಕೇಂದ್ರದ ಕಟ್ಟಡವಿರುತ್ತದೆ. ಪ್ರಸ್ತುತ ರೇಷ್ಮೆ ಇಲಾಖೆಯ ಯಾವುದೇ ಚಟುವಟಿಕೆ ನಡೆಯುತ್ತಿಲ್ಲ. ಈ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಗಾರರು ಇಲ್ಲದೇ ಇರುವುದರಿಂದ ಇಲಾಖೆಯ ಯಾವುದೇ ಕಾರ್ಯ ಚಟುವಟಿಕೆ ನಡೆಯುತ್ತಿಲ್ಲ. ನಿರಾಶ್ರಿತರಿಗೆ ಜಾಗ ಮೀಸಲಿಡುವ ಬಗ್ಗೆ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. ಪ್ರಸ್ತಾವನೆ ಸ್ವೀಕೃತವಾದಲ್ಲಿ ಪರಿಶೀಲಿಸಿ ಕ್ರಮವಹಿಸಲಾಗುವುದು.

ಸಂಖ್ಯೆ: ರೇಷ್ಮೆ 178 ರೇಇವಿ 2024

(ಕೆ.ವೆಂಕಟೇಶ್)
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು
ಕರ್ನಾಟಕ ಸರ್ಕಾರ